

ಕಾಲುವೆಗಳು ನೆದರ್ಲೆಂಡ್ಸ್‌ನ ಜೀವನಾಡಿಗಳು



ನೆದರ್ಲೆಂಡ್ಸ್‌ನಲ್ಲಿ ಯುವಜನರ ಮೋಜುಕೂಟ

ಸಾರ್ವಜನಿಕ ಪ್ರದೇಶಗಳು ಹಾಗೂ ಹುಲ್ಲು ಹಾಸಿನ ಮೇಲೆ ನಡೆದಾಡುವುದು, ಕುಳಿತುಕೊಳ್ಳುವುದನ್ನು ನಿಷೇಧಿಸಲಾಗಿದೆ. ಗೊತ್ತುಪಡಿಸಿದ ಮಾರ್ಗಗಳಲ್ಲಿ ಮಾತ್ರ ನಡೆಯಬಹುದು ಅಥವಾ ಕುಳಿತುಕೊಳ್ಳಬಹುದು.

## ಪ್ರವಾಸಿಗರಿಗೆ ಟೈಂ ಟೇಬಲ್

ಕಾಡು ಮೊದಲಾದ ಪ್ರಾಕೃತಿಕ ಸ್ಥಳಗಳಲ್ಲಿ ಸೂರ್ಯಾಸ್ತದ ನಂತರ ಹಾಗೂ ಸೂರ್ಯೋದಯಕ್ಕೂ ಮುನ್ನ ಸಾರ್ವಜನಿಕರ ಪ್ರವೇಶವನ್ನು ನಿರ್ಬಂಧಿಸಲಾಗಿರುತ್ತದೆ. ರಾತ್ರಿವೇಳೆ ಕಾಡಿನಲ್ಲಿ ಅಡ್ಡಾಡುವಂತಿಲ್ಲ. ಪ್ರಾಣಿಗಳ ಬೇಟೆ ನಿಷಿದ್ಧ. ಕಾಡಿನಲ್ಲಿ ದೊರೆಯುವ ಸಕಲವೂ ಪುರಸಭೆಯ ಸ್ವತ್ತು. ಹಾಗಾಗಿ ಅಣಬೆ, ಪಾಚಿ, ಓಕ್ ಮರದ ಹಣ್ಣುಗಳು, ಕಟ್ಟಿಗೆ, ಹೀಗೆ ಯಾವುದೇ ಉತ್ಪನ್ನವನ್ನು ಸಾರ್ವಜನಿಕರು ತೆಗೆದುಕೊಂಡು ಹೋಗುವಂತಿಲ್ಲ.

## ಮದುವೆಗೂ ಷರತ್ತು

ಮದುವೆಯಾಗಬೇಕಾದರೆ ಗಂಡು ಮತ್ತು ಹೆಣ್ಣು ಇಬ್ಬರೂ ಡಚ್ ಪ್ರಜೆ ಆಗಿರಲೇಬೇಕು. ಹೊರದೇಶದಿಂದ ಬಂದವರನ್ನು ಪ್ರೀತಿಸಿ ಮದುವೆಯಾಗಲು ಕೆಲವು ನಿಯಮಗಳನ್ನು ಅನುಸರಿಸಬೇಕಾಗುತ್ತದೆ. ಇಲ್ಲದಿದ್ದಲ್ಲಿ ಕಾನೂನಾತ್ಮಕವಾಗಿ ಮದುವೆಯಾಗುವಂತಿಲ್ಲ.

## ವಯಸ್ಕರಿಗೆ ಮಾತ್ರ!

ಹದಿನೆಂಟು ವರ್ಷಕ್ಕಿಂತಲೂ ಕಡಿಮೆ ವಯಸ್ಸಿನವರು ಸಾಮಾನ್ಯ ಕಾಫಿ ಶಾಪ್‌ಗೆ (ಕೆಫೆಗೆ) ಹೋಗುವುದು ಕಾನೂನುಬಾಹಿರವಲ್ಲ. ಆದರೆ, ಮಾದಕ ವಸ್ತುಗಳನ್ನು (ಡ್ರಗ್ಸ್) ಮಾರಾಟ ಮಾಡುವ ಕೆಫೆಗಳ ಪ್ರವೇಶಕ್ಕೆ ಮತ್ತು ಡ್ರಗ್ಸ್ ಸೇವನೆಗೆ ನಿರ್ಬಂಧವಿದೆ. ಮದ್ಯಪಾನ ಮಾಡಲೂ 18 ವರ್ಷ ತುಂಬಿರಬೇಕು.

ಯಾವುದೇ ಕಾಫಿ ಶಾಪ್‌ನಲ್ಲಿ ಗಾಂಜಾವನ್ನು ಧಾರಾಳವಾಗಿ ಸೇವಿಸಬಹುದು; ಸಿಗರೇಟ್ ಸೇದುವಂತಿಲ್ಲ. ಒಂದು ವೇಳೆ ಅರ್ಧ ಸಿಗರೇಟಿಗೆ ಗಾಂಜಾ ತುಂಬಿಸಿ ಸೇವಿಸಿದರೆ, ಕಾನೂನಿನ ಪ್ರಕಾರ ನಿಗದಿಪಡಿಸಲಾದ ದಂಡದ ಪ್ರಮಾಣಕ್ಕಿಂತಲೂ ಅರ್ಧದಷ್ಟು ದಂಡ ತೆರಬೇಕಾಗುತ್ತದೆ. ನಗರದ ಬೀದಿಗಳಲ್ಲಿ ಗಾಂಜಾ ಸೇವಿಸುವುದು ಕಾನೂನುಬಾಹಿರ.

## ಕೆನಾಲ್ ಮನೆಗಳು

ನೆದರ್‌ಲೆಂಡ್ ಕೆನಾಲ್‌ಗಳು ಮತ್ತು ಕೆನಾಲ್ ಮನೆಗಳ ಸುಂದರ ದೇಶ. ಅಲ್ಲಿನ ನೇರವಾಗಿ ಬೆಳೆದ ಮರಗಳೂ ಆಕರ್ಷಕ. ಕೆನಾಲ್ ಮನೆಗಳು ಬಣ್ಣ ಕಳೆದುಕೊಳ್ಳದಂತೆ ಹಾಗೂ ಸುಸ್ಥಿತಿಯಲ್ಲಿದ್ದು ವಾಸಕ್ಕೆ ಯೋಗ್ಯವಾಗಿರುವಂತೆ ನೋಡಿಕೊಳ್ಳಬೇಕು. ಮರಗಳು ಕೆನಾಲ್ ಒಳಗೆ ಬೀಳದಂತೆ ಬಲಪಡಿಸಬೇಕೆಂಬ ಕಾನೂನು ಇದೆ.

## ಉದ್ಯಾನದ ಆನಂದಕ್ಕೆ ಚೌಕಟ್ಟು

ದೇಶದ ಬಹಳಷ್ಟು ಪಟ್ಟಣಗಳಲ್ಲಿರುವ ಉದ್ಯಾನವನಗಳಲ್ಲಿನ ಹಸಿರು ಹುಲ್ಲಿರುವ

### ಅವಿವಾಹಿತರಿಗೆ ಕಡಿವಾಣ

ಮೂವರಿಗಿಂತಲೂ ಹೆಚ್ಚಿನ ಅವಿವಾಹಿತರು ಒಂದು ಮನೆಯನ್ನು ಹಂಚಿಕೊಂಡು ವಾಸಿಸಲು ಅಲ್ಲಿ ಅನುಮತಿಯಿಲ್ಲ. ಕುಟುಂಬವಾದರೆ, ಎಷ್ಟು ಜನ ಬೇಕಾದರೂ ಒಂದು ಮನೆಯಲ್ಲಿ ವಾಸವಿರಬಹುದು.

## ಬಾಡಿಗೆದಾರನಿಗೆ ರಕ್ಷಣೆ

ಬಹುತೇಕ ದೇಶಗಳಲ್ಲಿ ಮನೆಯ ಮಾಲೀಕನಿಗಿರುವಷ್ಟು ಅಧಿಕಾರ ಬಾಡಿಗೆದಾರರಿಗೆ ಇರುವುದಿಲ್ಲ. ಇಲ್ಲಿ ಪರಿಸ್ಥಿತಿ ತದ್ವಿರುದ್ಧ. ಬಾಡಿಗೆದಾರನಿಗೆ ಇರುವಷ್ಟು ರಕ್ಷಣೆಯನ್ನು ಮನೆಯ ಮಾಲೀಕನಿಗೆ ನೀಡಲಾಗಿಲ್ಲ. ಸರಿಯಾದ ಸಮಯಕ್ಕೆ ಮನೆಯ ಬಾಡಿಗೆ ಪಾವತಿಸದಿದ್ದರೂ, ಮನೆಯನ್ನು ವಿರೂಪಗೊಳಿಸಿದರೂ ಮನೆ ಮಾಲೀಕ ಬಾಡಿಗೆದಾರನನ್ನು ಮನೆಯಿಂದ ಹೊರದಬ್ಬುವಂತಿಲ್ಲ. ನ್ಯಾಯಾಲಯ ಅನುಮತಿಸಿದರೆ ಮಾತ್ರ ಮನೆಯನ್ನು ಖಾಲಿ ಮಾಡಿಸಬಹುದು.

## ಸೌಂದರ್ಯಕ್ಕಾಗಿ ನಿರ್ಬಂಧ

ಪಾದಚಾರಿ ರಸ್ತೆಯಲ್ಲಿ ಯಾವುದೇ ರೀತಿಯ ಚಿತ್ರವನ್ನಾಗಲೀ, ಸಂದೇಶವನ್ನಾಗಲೀ ಬರೆಯುವಂತಿಲ್ಲ. ಈ ಕಾನೂನು ಮಕ್ಕಳಿಗೂ ಅನ್ವಯ. ಕೆನಾಲ್‌ಗಳಲ್ಲಿ ಮೂತ್ರ ವಿಸರ್ಜಿಸುವುದು ಅಪರಾಧ. ಆದರೆ, ಗರ್ಭಿಣಿ ಸ್ತ್ರೀಯರಿಗೆ ಇದರಿಂದ ವಿನಾಯಿತಿ ನೀಡಲಾಗಿದೆ.

## ಫೋಟೊ ನಿರ್ಬಂಧಿತ 'ಕೆಂಪುದೀಪ'

ಆಮ್‌ಸ್ಟರ್ ಡ್ಯಾಂನ ಪ್ರಸಿದ್ಧ ರೆಡ್‌ಲೈಟ್ ಜಿಲ್ಲೆಗೆ ಯಾರು ಬೇಕಾದರೂ ಭೇಟಿ ನೀಡಬಹುದು. ಅಲ್ಲಿನ ವೇಶ್ಯೆಯರನ್ನು ನೋಡಿ ಆನಂದಿಸಬಹುದು. ಇಚ್ಛಿಸಿದಲ್ಲಿ ಅವರೊಂದಿಗೆ ದೈಹಿಕ ಸಂಪರ್ಕ ಬೆಳೆಸಬಹುದು. ಆದರೆ, ಫೋಟೊ ತೆಗೆಯುವಂತಿಲ್ಲ.

## ಬೈಯುವಂತಿಲ್ಲ, ಬೊಗಳುವಂತಿಲ್ಲ!

ಜಾತಿ, ಧರ್ಮ, ನಂಬಿಕೆ, ಸಂಬಂಧಗಳ ಬಗ್ಗೆ, ಅಂಗವೈಕಲ್ಯದ ಬಗ್ಗೆ ಸಾರ್ವಜನಿಕವಾಗಿ ಹೀಯಾಳಿಸಿದರೆ, ಒಂದರಿಂದ ಎರಡು ವರ್ಷಗಳ ಜೈಲು ಶಿಕ್ಷೆ (ಅಥವಾ ದಂಡ) ಅನುಭವಿಸಬೇಕಾಗುತ್ತದೆ.

ನೆದರ್‌ಲೆಂಡ್‌ನಲ್ಲಿ ಬೀದಿ ನಾಯಿಗಳಿಲ್ಲ. ಸಾಕು ನಾಯಿಗಳು ಇತರರನ್ನು ನೋಡಿ ಬೊಗಳಿದರೆ ದಂಡ ವಿಧಿಸಲಾಗುತ್ತದೆ. ಹೀಗೆ ದಂಡ ವಿಧಿಸುವುದು ಪೊಲೀಸರ ವಿವೇಚನೆಗೆ ಬಿಡಲಾಗಿದೆ.

ಪ್ರತಿಕ್ರಿಯಿಸಿ: feedback@sudha.co.in